

# ಒಟಿಟಿ ಬದಲಾಗ್ತಾ ಇದೆ ಗಿರಿರಾಜ್ ರಾವ್

ಹಿರಿಯ ನಟ ಗಿರಿರಾಜ್ ರಾವ್ ಅವರು ಬದಲಾದ ಕಂಟೆಂಟ್ ಸ್ವರೂಪದ ಬಗೆಗೆ ಇತ್ತೀಚೆಗೆ ಅರ್ಥಪೂರ್ಣವಾಗಿ ಮಾತಾಡಿದರು.

ಹೃಷಿಕೇಶ್ ಮುಖರ್ಜಿ, ಸಾಯಿ ಪರಾಂಜಪೆ, ಬಸು ಚಟರ್ಜಿ ನಿರ್ದೇಶನದ ಸಿನಿಮಾಗಳನ್ನು ಕಂಡುಂಡು ಬೆಳೆದಿರುವ ಅವರು 1990ರ ನಂತರ ಚಿತ್ರರಂಗ ವಿಪರೀತ ಬದಲಾವಣೆ ಕಂಡಿರುವುದನ್ನು ಗುರುತಿಸುತ್ತಾರೆ. ನಾಯಕ, ಪ್ರತಿನಾಯಕ ಇಬ್ಬರಿಗೂ ವಾಸ್ತವ ಬದುಕಿನ ಪಾತ್ರಗಳಿಗೂ ಮೀರಿದ ರೂಹು ಇರಬೇಕು ಎನ್ನುವ ಧೋರಣೆ ಈ ದಶಕದಲ್ಲೇ ಹೆಚ್ಚಾಗಿದ್ದು. ಮುಂದೆ ಶುಕ್ರವಾರ ಸಿನಿಮಾ ತೆರೆಕಾಣಬೇಕು ಎಂದರೆ, ಅದರಲ್ಲಿ ಐಟಂ ಸಾಂಗ್ ಇಲ್ಲವೇ ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಲು ಆರಂಭಿಸಿದರು. ಜನರು ಅದನ್ನು ಬಯಸುತ್ತಾರೆ ಎಂದು ತಮ್ಮ ನಂಬಿಕೆಯನ್ನೇ ಮುಂದುಮಾಡಿದರು. ಅದರ ಫಲವೇ ಈಗಿನ 'ಲಾರ್ಜರ್ ದ್ಯಾನ್ ಲೈಫ್' ಚಿತ್ರಗಳು ಎಂದು ಗಿರಿರಾಜ್ ವಿಶ್ಲೇಷಿಸುತ್ತಾರೆ.

ಸಿನಿಮಾಗಳ ಸ್ವರೂಪ ಅದಾದರೆ, ಒಟಿಟಿ ಕಂಟೆಂಟ್ ಕಥೆ ಇನ್ನೊಂದು ರೀತಿಯದ್ದು. ಅಲ್ಲಿ ಹಿಂಸೆ ಇಡುಕಿರಿದಿದೆ. ಈ ಹೊತ್ತಿನಲ್ಲಿಯೇ 'ಡಬ್ಬಾ ಕಾರ್ಟರ್' ಶೀರ್ಷಿಕೆಯ ಸರಣಿ ಆಸಕ್ತಿಕರವಾಗಿದೆ ಎಂದವರು ಶ್ಲಾಘಿಸಿದ್ದಾರೆ. ತಾವು ಅಭಿನಯಿಸಿರುವ 'ದುಪಹಿಯಾ' (ಎರಡು ಚಕ್ರಗಳು) ಕೂಡ ಹಳೆಯ ಕಾಲದ 'ನುಕ್ಕಡ್', 'ಬುನಿಯಾದ್' ರೀತಿಯ ಧಾರಾವಾಹಿಗಳ ಮಾದರಿಯನ್ನು ನೆನಪಿಸುವಂತಿವೆ ಎಂದೂ ಹೆಮ್ಮೆಯಿಂದ ಹೇಳಿದ್ದಾರೆ.

# ಪರಿಣೀತಿ ಕಂಡಿದ್ದ ಪಾರ್ಟ್ ಟೈಮ್ ಸಿರಿವಂತಿಕೆ

ಬಹಳ ವರ್ಷ ಸೈಕಲ್ ಹೊಡೆದು, ಚಿತ್ರರಂಗದಲ್ಲಿ ಯಶಸ್ಸು ಕಂಡವರ ಕಥೆಗಳು ಯಾವತ್ತಿಗೂ ಆಸಕ್ತಿಕರ. ಪರಿಣೀತಿ ಚೋಪ್ರಾ ಅವರ ಜೀವನಾನುಭವದಲ್ಲಿಯೂ ಅಂತಹ ತುಣುಕು ಇದೆ. ಪ್ರಿಯಾಂಕಾ ಚೋಪ್ರಾ ಸಂಬಂಧಿ ಈ ನಟಿ ಎನ್ನುವುದೇನೋ ನಿಜ. ಪ್ರಿಯಾಂಕಾ ಅವರಂತೆಯೇ ಪರಿಣೀತಿಯೂ ಮಧ್ಯಮ ವರ್ಗದ ಕುಟುಂಬದವರು.

ಚಿಕ್ಕಂದಿನಲ್ಲಿ ಹುಟ್ಟುಹಬ್ಬ ಬಂದಾಗ ಪರಿಣೀತಿ ಕೂಡ ವಾರಗೆಯವರಂತೆ ನಿರೀಕ್ಷೆಗಳನ್ನು ಇಟ್ಟುಕೊಳ್ಳುತ್ತಿದ್ದರು. ಮಿಲೇನಿಯಲ್ ಮಕ್ಕಳಂತೆ ಹೊಸ ಬಟ್ಟೆ ಬೇಕು, ಕೇಕ್ ಕಟ್ ಮಾಡಬೇಕು ಎಂಬೆಲ್ಲ ಬಯಕೆ ಅವರಿಗೂ ಇತ್ತು. ಆದರೆ, ಅವರ ತಂದೆ–ತಾಯಿಗೆ ಆಗ ಕೇಕ್ ಕೂಡ ದುಬಾರಿಯಾಗಿತ್ತು. ಹೀಗಾಗಿ ಒಂದು ರಸಮಲಾಯ್ ಅಥವಾ ಒಂದು ರಸಗುಲ್ಲಾ ತಂದು ಮಗಳಿಗೆ ಕೊಡುತ್ತಿದ್ದರು. ಅದನ್ನೇ ಕೇಕ್ ತರಹ ಕಟ್ ಮಾಡಿ ಇಷ್ಟಿಷ್ಟೇ ಉಳಿದವರಿಗೂ ತಿನಿಸಿ, ಖುಷಿಪಡುತ್ತಿದ್ದರು.

ಅವರ ತಾತ ಹಾಗೂ ಅಜ್ಜಿ ಅರ್ಥಾತ್ ಅಮ್ಮನ ತಂದೆ–ತಾಯಿ, ಕೆನ್ಯಾದಲ್ಲಿ ವಾಸವಿದ್ದರು. ಅವರಿಗೆ ಶ್ರೀಮಂತಿಕೆ ಇತ್ತು. ಪರಿಣೀತಿ ಹಾಗೂ ಅವರ ಸಹೋದರರಿಗೆ ತಾತನ ದೇಶ ಇದ್ದ ದೇಶಕ್ಕೆ ಹೋಗಿ, ಬರುವ ಅವಕಾಶ ಆಗೊಮ್ಮೆ ಈಗೊಮ್ಮೆ ಸಿಗುತ್ತಿತ್ತು. ಅದರಲ್ಲೂ ಬೇಸಿಗೆ ರಜಾ ದಿನಗಳಲ್ಲಿ ಅವರು ಮೊಮ್ಮಕ್ಕಳನ್ನು ಕರೆಸಿಕೊಳ್ಳುತ್ತಿದ್ದರು. ವಿಮಾನದ ಟಿಕೆಟ್ ಬುಕ್ ಮಾಡಿಸಿ, ಅಲ್ಲಿಗೆ ಅವರು ಆಹ್ವಾನ ನೀಡುತ್ತಿದ್ದರು. ತಾತ–ಅಜ್ಜಿ ಮನೆಯಲ್ಲಿ ಒಂದು ತಿಂಗಳು ಖುಷಿಯಿಂದ ಶ್ರೀಮಂತಿಕೆಯ ಬದುಕು ಅನುಭವಿಸಿ ಬರುತ್ತಿದ್ದ ನಟಿಗೆ ಆಮೇಲೆ ಇಲ್ಲಿ ಮತ್ತದೇ ಬಡತನದ ಜೀವನ.

ಜೀವನದ ಎರಡು ಬೇರೆ ಬೇರೆ ಪರಿಸ್ಥಿತಿಗಳನ್ನು ನೋಡಿ, ಅವಕ್ಕೆ ಹೊಂದಿಕೊಂಡು ಬಂದದ್ದರಿಂದಲೇ ತಮಗೆ ಹಲವಾರು ಬಗೆಯ ಜನರ ಜೊತೆ ಸಲೀಸಾಗಿ ಬೆರೆಯಲು ಸಾಧ್ಯ ಆಯಿತು ಎನ್ನುತ್ತಾರೆ ಪರಿಣೀತಿ. ಕಳೆದ ವರ್ಷ ಇಮ್ತಿಯಾಜ್ ಅಲಿ ನಿರ್ದೇಶನದ 'ಚಮ್ಕಿಲಾ' ಚಿತ್ರದಲ್ಲಿ ದಿಲ್ಜಿತ್ ದೊಸಾಂಝ್ ಜೋಡಿಯಾಗಿ ಅಭಿನಯಿಸಿದ್ದ ಈ ನಟಿ, ವೆಬ್ ಸರಣಿಗಳತ್ತಲೂ ಮುಖ ಮಾಡಿದ್ದಾರೆ. Netflixಗಾಗಿ ಸಿದ್ಧಗೊಳ್ಳುತ್ತಿರುವ, ರೆನ್ಸಿಲ್ ಡಿಸಿಲ್ವಾ ನಿರ್ದೇಶನದ ವೆಬ್ ಸರಣಿಯಲ್ಲಿ ಅವರು ಅಭಿನಯಿಸುತ್ತಿದ್ದಾರೆ. ಚಿತ್ರೀಕರಣ ನಡೆಯುತ್ತಿದೆ.

